ವಿಷಯ: ಕಾರ್ಕಳ ತಾಲ್ಲೂಕಿನಲ್ಲಿ ಬೀಟೆ ಮರ ಕಳವು ಪ್ರಕರಣ.

1199 (1746)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1) ಕಳೆದ ಮೂರು ವರ್ಷದಿಂದ ಈಚೆಗೆ ಕಾರ್ಕಳ ತಾಲ್ಲೂಕ್ ಹೆಬ್ರಿ ವಲಯದಲ್ಲಿ ಎಷ್ಟು ಬೀಟೆ ಮರ ಕಳವು ಪ್ರಕರಣ ದಾಖಲಾಗಿದೆ? (ವರ್ಷವಾರು ವಿವರ)

2) ಈ ಪ್ರಕರಣದಲ್ಲಿ ಶಾಮೀಲಾದ ವ್ಯಕ್ತಿಗಳ ಪೂರ್ಣ ವಿಳಾಸ ನೀಡುವುದು ಹಾಗೂ ಈ ವ್ಯಕ್ತಿಗಳ ಮೇಲೆ ಕೈಗೊಂಡ ಕ್ರಮಗಳೇನು?

3) ಇಂತಹ ವ್ಯಕ್ತಿಗಳ ಮೇಲೆ ನಿಗಾ ಇಡಲಾಗಿದೆಯೇ? ಹಾಗೂ ಈ ವ್ಯಕ್ತಿಗಳು ಬೇರೆ ಯಾವುದೇ ಅರಣ್ಯ ತಕ್ಷೀರು ಪ್ರಕರಣದಲ್ಲಿ ಭಾಗಿಯಾಗಿದ್ದಾರೆಯೇ?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

1) ಕಳೆದ ಮೂರು ವರ್ಷಗಳಲ್ಲಿ ಪತ್ತೆ ಹಚ್ಚಿದ ಬೀಟೆ ಮರಗಳ ಕಳವು ಪ್ರಕರಣಗಳು ಇಂತಿವೆ:

1995-96	-	ಇರುವುದಿಲ್ಲ
1996-97	-	1
1997-98	-	ಇರುವುದಿಲ್ಲ

2) 1996-97ನೇ ಸಾಲಿನಲ್ಲಿ ಪತ್ತೆ ಹಚ್ಚಲಾದ 1 ಪ್ರಕರಣದಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ. ಈ ಪ್ರಕರಣದಲ್ಲಿ 14 ಬೀಟೆ ತುಂಡು-0.410 ಘ.ಮೀ. ನಾಟಿಗಳನ್ನು ಸರ್ಕಾರ ಸ್ವಾಧೀನಕ್ಕೆ ಪಡೆದು ಹರಾಜು ಮಾಡಲಾಗಿರುತ್ತದೆ. ಹರಾಜು ಮೌಲ್ಯ ರೂ. 5000 ಮತ್ತು ತೆರಿಗೆಗಳು ಸರ್ಕಾರಕ್ಕೆ ವಸೂಲಾಗಿರುತ್ತದೆ.

3) ಉದ್ಭವಿಸುವುದಿಲ್ಲ.

ವಿಷಯ: ದಾವಣಗೆರೆ ಜಿಲ್ಲೆಯಲ್ಲಿ ರಸ್ತೆ ದುರಸ್ತಿ

1200 (1690)

ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಗೊಂಡ): ಮಾನ್ಯ ಲೋಕೋಪಯೋಗಿ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ. ರಸ್ತೆ ಬರುತ್ತದೆ?

ಆ) ಆ ಪೈಕಿ ಎಷ್ಟು ಕಿ.ಮೀ. ರಸ್ತೆ ದುರಸ್ತಿ ಮಾಡಲಾಗಿದೆ? ಉಳಿದ ರಸ್ತೆಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು?

ಇ) ಈ ಸಾಲಿನಲ್ಲಿ ಎಷ್ಟು ಹಣವನ್ನು ಕಾದಿರಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ದಾವಣಗೆರೆ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು 492 ಕಿ.ಮೀ. ರಸ್ತೆ ಬರುತ್ತದೆ.

ಆ) ವಾರ್ಷಿಕ ದುರಸ್ತಿಯಲ್ಲಿ ಅವಶ್ಯಕತೆಗನುಸಾರವಾಗಿ ಹಾಗೂ ಅನುದಾನಕ್ಕನುಗುಣವಾಗಿ, ವಿಶೇಷ ದುರಸ್ತಿ ಮತ್ತು ನವೀಕರಣ ಹಣದಡಿ 33.20 ಕಿಮೀ.ಗಳ ರಸ್ತೆಯನ್ನು ಈಗಾಗಲೇ ದುರಸ್ತಿಪಡಿಸಿದ್ದು, 75.00 ಕಿ.ಮೀ. ರಸ್ತೆಯ ದುರಸ್ತಿ ಪ್ರಗತಿಯಲ್ಲಿರುತ್ತದೆ. ಇದಲ್ಲದೇ ನಬಾರ್ಡ್ ಸಾಲ ನೆರವಿನಡಿಯಲ್ಲಿ 22 ಕಿಮೀ. ರಸ್ತೆ ಅಭಿವೃದ್ಧಿಪಡಿಸಲು 98.00 ಲಕ್ಷ ರೂ.ಗಳಿಗೆ ಮಂಜೂರಾತಿ ನೀಡಿದೆ.

ಇ) ವಿವರ

ತಾಲ್ಲೂಕು	1997-98 (ಲಕ್ಷ ರೂ.ಗಳಲ್ಲಿ)	1998-99
ದಾವಣಗೆರೆ	16.34	ಕ್ರಿಯಾ ಯೋಜನೆ
ಹರಿಹರ	11.03	ಇನ್ನೂ ಮಂಜೂರಾಗಿರುವುದಿಲ್ಲ
ಜಗಳೂರು	25.78	

ವಿಷಯ: ಕರ್ನಾಟಕ ಚಲನಚಿತ್ರೋದ್ಯಮ ಅಭಿವೃದ್ಧಿ ನಿಗಮದ ಕಛೇರಿಯನ್ನು ಜಯನಗರದಿಂದ ಸ್ಥಳಾಂತರಿಸುವುದು.

1201 (1654)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ): ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?